# ಥ್ರಿಲ್ಲರ್ ಕಥೆಯೊಂದಿಗೆ ಮೇಘನಾ ಕಂಬ್ಯಾಕ್



ಹಲವು ವರ್ಷಗಳ ನಂತರ ನಟಿ ಮೇಘನಾ ರಾಜ್, 'ತತ್ಸಮ ತದ್ಭವ' ಸಿನಿಮಾ ಮೂಲಕ ಚಿತ್ರರಂಗಕ್ಕೆ ಮರಳುತ್ತಿದ್ದು, ಸಿನಿಮಾ ಸೆಪ್ಟೆಂಬರ್ 15ರಂದು ಬಿಡುಗಡೆ ಕಾಣಲಿದೆ.

ನಟ ಪ್ರಜ್ವಲ್ ದೇವರಾಜ್ ಹಾಗೂ ಮೇಘನಾ ರಾಜ್ ಮುಖ್ಯ ಭೂಮಿಕೆಯಲ್ಲಿ ನಟಿಸುತ್ತಿರುವ ಈ ಸಿನಿಮಾ, 'ಎಮೋಷನಲ್ ಎಂಟರ್‌ಟೇನರ್' ಎಂದು ಚಿತ್ರತಂಡ ಹೇಳಿಕೊಂಡಿದೆ. ಸಿನಿಮಾದಲ್ಲಿ ಮಧ್ಯಮ ವರ್ಗದ ಯುವತಿಯ ಪಾತ್ರವನ್ನು ಮೇಘನಾ ನಿರ್ವಹಿಸಿದ್ದಾರೆ. ಒಂದೇ ರಾತ್ರಿ ಇಡೀ ಜೀವನವೇ ಬದಲಾಗಿಬಿಡುವ ಸನ್ನಿವೇಶವನ್ನು ಹೆಣೆಯಲಾಗಿದೆ.

'ಸಿನಿಮಾದ ಕೆಲವು ಮುಖ್ಯ ದೃಶ್ಯಗಳನ್ನು ಶೂಟ್ ಮಾಡುತ್ತಿರುವಾಗ ಎಮೋಷನಲ್ ಆಗುತ್ತಿದ್ದೆ. ಈ ಪಾತ್ರದೊಂದಿಗೆ ನಾನು ವೈಯಕ್ತಿಕವಾಗಿಯೂ ಬೆರೆತಿದ್ದೇನೆ, ನನ್ನ ಪಾತ್ರ ಹೀಗೇ ಇರಬೇಕು, ಇದೇ ದಿಕ್ಕಿನಲ್ಲಿ ಸಾಗಬೇಕು ಎಂದು ನಿರ್ದಿಷ್ಟವಾಗಿ ಕೆಲವು ವಿಚಾರಗಳನ್ನು ಅಳವಡಿಸಿಕೊಂಡಿದ್ದೆ. ಸಿನಿಮಾ ಬಗ್ಗೆ ಮನಸ್ಸಿನಲ್ಲಿ ಒಂದು ದೃಶ್ಯ ಕಟ್ಟಿಕೊಂಡಿದ್ದೆ. ನಾನು ಹೇಗೆ ಬಯಸಿದ್ದೆನೋ ಹಾಗೇ ಸಿನಿಮಾ ಹಾಗೂ ನನ್ನ ಪಾತ್ರ ಮೂಡಿಬಂದಿದೆ' ಎಂದು ತತ್ಸಮ ತದ್ಭವ ಕುರಿತು ಮಾತನಾಡಿದ್ದಾರೆ ಮೇಘನಾ.

'ಈ ಸಿನಿಮಾ ನೋಡುವಾಗ ಪ್ರೇಕ್ಷಕರು ಬರೀ ಮೂಕ ಪ್ರೇಕ್ಷಕರಾಗಿರುವುದಿಲ್ಲ. ತಾವೂ ಈ ಸಿನಿಮಾದಲ್ಲಿ ಒಂದಾಗುತ್ತಾರೆ. ಹಾಗೆಯೇ ಅವರೂ ತನಿಖೆ ಮಾಡುವವರಾಗುತ್ತಾರೆ. ಪ್ರಜ್ವಲ್ ಕೂಡ ಹಿಂದೆಂದೂ ಕಾಣಿಸಿಕೊಂಡಿರದಂಥ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ' ಎಂದು ಭರವಸೆ ನೀಡಿದ್ದಾರೆ.

ವಿಶಾಲ್ ಆತ್ರೇಯ ಸಿನಿಮಾ ನಿರ್ದೇಶಿಸಿದ್ದಾರೆ. 'ತತ್ಸಮ ತದ್ಭವ' ನಂತರ ಮೇಘನಾ ಅಭಿನಯದ ಮತ್ತೊಂದು ಸಿನಿಮಾ 'ಬುದ್ಧಿವಂತ 2' ಕೂಡ ಬಿಡುಗಡೆ ಹಾದಿಯಲ್ಲಿದೆ. ■

# ತಮಿಳು, ತೆಲುಗಿನಲ್ಲಿ ಶಿವಣ್ಣ ಡಬ್ಬಿಂಗ್



'ಪಾತ್ರ ಚಿಕ್ಕದು, ಪರಿಣಾಮ ದೊಡ್ಡದು...' ಈಚೆಗೆ ಬಿಡುಗಡೆಯಾದ, ನಟ ರಜನೀಕಾಂತ್ ಅಭಿನಯದ 'ಜೈಲರ್' ಸಿನಿಮಾದಲ್ಲಿ ನಟ ಶಿವರಾಜ್‌ಕುಮಾರ್ ಪಾತ್ರದ ಬಗ್ಗೆ ಜನರ ಬಾಯಲ್ಲಿ ಕೇಳಿಬರುತ್ತಿರುವ ಮೆಚ್ಚುಗೆಯ ಮಾತಿದು.

'ಜೈಲರ್' ಸಿನಿಮಾದಲ್ಲಿ ಕೇವಲ ಹನ್ನೊಂದು ನಿಮಿಷ, ಎರಡು ದೃಶ್ಯಗಳಲ್ಲಿ ಮಾತ್ರ ಶಿವರಾಜ್‌ಕುಮಾರ್ ಕಾಣಿಸಿಕೊಂಡಿದ್ದು, ಸ್ಕ್ರೀನ್ ಸ್ಪೇಸ್ ಕಡಿಮೆಯಿದ್ದರೂ ಇಂಪ್ಯಾಕ್ಟ್ ಮಾತ್ರ ದೊಡ್ಡದಾಗಿಯೇ ಇದೆ ಎಂದು ಪರಭಾಷಿಗರೂ ಕೊಂಡಾಡಿದ್ದರು. ತಮಿಳುನಾಡು, ಕೇರಳದಲ್ಲೂ ಶಿವಣ್ಣನ ಮ್ಯಾನರಿಸಂಗೆ ಮೆಚ್ಚುಗೆ ಹರಿದುಬಂದಿತ್ತು.

ಈ ಖುಷಿಯಲ್ಲೇ ಶಿವರಾಜ್‌ಕುಮಾರ್ ಅಭಿನಯದ ಮತ್ತೊಂದು ಕನ್ನಡ ಸಿನಿಮಾ ತೆರೆಕಾಣುವ ಸಿದ್ಧತೆಯಲ್ಲಿದೆ. ಶಿವರಾಜ್‌ಕುಮಾರ್ ಅಭಿನಯದ ಮೊದಲ ಪ್ಯಾನ್ ಇಂಡಿಯಾ ಸಿನಿಮಾ ಕೂಡ ಆಗಿರುವ 'ಘೋಸ್ಟ್' ಅನ್ನು ತೆರೆಗೆ ತರುವ ತಯಾರಿ ನಡೆಯುತ್ತಿದೆ.

'ಸಿನಿಮಾ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ರೀ ರೆಕಾರ್ಡಿಂಗ್, ವಿಎಫ್‌ಎಕ್ಸ್ ಕೆಲಸಗಳು ನಡೆಯುತ್ತಿವೆ. ಕನ್ನಡದಲ್ಲಿ ಡಬ್ಬಿಂಗ್ ಕೆಲಸ ಮುಗಿದಿದ್ದು, ಬೇರೆ ಭಾಷೆಗಳ ಡಬ್ಬಿಂಗ್ ಕೆಲಸ ನಡೆಯುತ್ತಿದೆ' ಎಂದು ಸಿನಿಮಾ ತಂಡ ಹೇಳಿದೆ. ತಮಿಳು ಹಾಗೂ ತೆಲುಗು ಭಾಷೆಯಲ್ಲಿ ಸ್ವತಃ ಶಿವರಾಜ್‌ಕುಮಾರ್ ಡಬ್ಬಿಂಗ್ ಮಾಡಲಿರುವುದಾಗಿ ತಿಳಿದುಬಂದಿದೆ. ಮಲೆಯಾಳಂ ಹಾಗೂ ಹಿಂದಿಯಲ್ಲಿ, ಶಿವಣ್ಣ ಮ್ಯಾನರಿಸಂಗೆ ಸೂಕ್ತ ದನಿಯ ಹುಡುಕಾಟದಲ್ಲಿದೆಯಂತೆ ಚಿತ್ರತಂಡ.

ದಸರಾ ಹಬ್ಬದ ಸಂದರ್ಭ, ಅಕ್ಟೋಬರ್ 19ರಂದು ಸಿನಿಮಾ ಬಿಡುಗಡೆ ಮಾಡುವ ಯೋಜನೆ ಹಾಕಿಕೊಳ್ಳಲಾಗಿದೆ. ಎಂ.ಜಿ. ಶ್ರೀನಿವಾಸ್ ನಿರ್ದೇಶನದ ಈ ಸಿನಿಮಾದಲ್ಲಿ ಅರ್ಚನಾ ಜೋಯಿಸ್ ಪ್ರಮುಖ ಪಾತ್ರದಲ್ಲಿದ್ದು, ಬಾಲಿವುಡ್‌ನ ಅನುಪಮ್ ಖೇರ್ ಕನ್ನಡದಲ್ಲಿ ಮೊದಲ ಬಾರಿಗೆ ಕಾಣಿಸಿಕೊಳ್ಳುತ್ತಿದ್ದಾರೆ. ■